ಎಲ್.ಎ.ಸಿ ನಂಃ 27/2018
ಪಿ.ಡಬ್ಲೂ ನಂಃ 01

ಇಂದು ದಿನಾಂಕಃ 22.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ ಬಿ ಹೆಚ್ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು, ನಾನು ಈಗಾಗಲೇ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ದು, ಈ ದಿನ ಮುಂದುವರೆದ ಮುಖ್ಯವಿಚಾರಣಾ ಭಾಗವಾಗಿ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅರ್ಜಿದಾರರು ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಯಿತು.

| ಅ. ನಂ. | ದಾಖಲೆಗಳ ವಿವರ | ನಿಶಾನೆ ಸಂಖ್ಯೆ |
|---|---|---|
| 1 | Sale deed dated 01.04.2010 of Telsang village | Ex.P2 |
| 2 | Sale deed dated 05.05.2011 of Telsang village | Ex.P3 |
| 3 | Sale deed dated 10.07.2012 of Telsang village | Ex.P4 |
| 4 | Agreement to sell dated 28.07.2009 of Telsang village | Ex.P5 |
| 5 | Sale deed dated 08.12.2010 of Kohalli village | Ex.P6 |
| 6 | Sale deed dated 04.03.2011 of Kohalli village | Ex.P7 |
| 7 | Agreement to sell dated 02.04.2009 of Aigali village | Ex.P8 |
| 8 | Agreement to sell dated 18.07.2011 of Aigali village | Ex.P9 |
| 9 | Agreement to sell dated 03.12.2012 of Aigali village | Ex.P10 |
| 10 | Sale deed dated 08.04.2008 of Kokatnur village | Ex.P11 |
| 11 | Sale deed dated 19.07.2010 of Chamakeri village | Ex.P12 |
| 12 | Judgment in LAC No.23/2018 | Ex.P13 |
| 13 | Telsang village map | Ex.P14 |

ಈ ಕಾರಣ ಅರ್ಜಿಯನ್ನು ಪುರಸ್ಕರಿಸಿ ಅರ್ಜಿಯಲ್ಲಿ ಕೋರಿರುವಂತೆ ಹೆಚ್ಚಿನ ಬೆಲೆ ನಿಗದಿ ಮಾಡಬೇಕೆಂದು ಪ್ರಾರ್ಥನೆ.

<u>ಪಾಟೀ **ಸವಾಲುಃ 1ನೇ ಪ್ರತಿವಾದಿ ಪರ ಮಾನ್ಯ ಡಿ.ಜಿ.ಪಿ ರವರಿಂದಃ**</u>

ತೇಲಸಂಗ ಗ್ರಾಮ ಇದು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮ ಎಂದರೆ ಸರಿ. ತೇಲಸಂಗ ಗ್ರಾಮದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಫಲವತ್ತತೆಯ ಜಮೀನುಗಳಿರುತ್ತವೆ ಎಂದರೆ ಸರಿ. ಜಮೀನಿಗೆ ಫಲವತ್ತತೆಯ ಆಧಾರದ ಮೇಲೆ ಅವುಗಳ ಬೆಲೆಯಲ್ಲಿ ಬದಲಾವಣೆ ಇರುತ್ತದೆ ಎಂದರೆ ಸರಿ. ನೀರಾವರಿ ಜಮೀನುಗಳ ಬೆಲೆ ಹೆಚ್ಚಿ ಗೆ ಇರುತ್ತದೆ ಎಂದರೆ ಸರಿ. ತೇಲಸಂಗ ಗ್ರಾಮದಿಂದ ಕೋಹಳ್ಳಿ 15 ಕಿಮೀ ಅಂತರದಲ್ಲಿರುತ್ತದೆ. ತೇಲಸಂಗ ಮತ್ತು ಐಗಳಿ ಗ್ರಾಮಗಳು 14 ಕಿಮೀ ದೂರದಲ್ಲಿರುತ್ತದೆ. ಚಮಕೇರಿ 10 ಕಿಮೀ ಅಂತರದಲ್ಲಿರುತ್ತದೆ. ಬೇರೆ ಬೇರೆ ಗ್ರಾಮಗಳ ಜಮೀನುಗಳ ಫಲವತ್ತತೆ ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿ. ಐಗಳಿ ಗ್ರಾಮ ತೇಲಸಂಗ ಗ್ರಾಮಕ್ಕಿಂತ ದೊಡ್ಡ ಗ್ರಾಮ ಎಂದರೆ ಸರಿ.

2. ಮುಳುಗಡೆಯಾದ ಜಮೀನಿನ ಉತಾರ ಲಭ್ಯವಿರುತ್ತದೆ. ಸ್ವಾಧೀನಗೊಂಡ ಜಮೀನಿನ ಉತಾರದಲ್ಲಿ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ಸ್ವಾಧೀನಪಡಿಸಿಕೊಳ್ಳುವ ವರ್ಷಕ್ಕೆ ಸಂಬಂಧಿಸಿದ ಉತಾರೆ ಲಭ್ಯವಿರುತ್ತದೆ ಸದರಿ ಉತಾರೆಯಲ್ಲಿ ಸಂಪೂರ್ಣ ಮಾಹಿತಿ ನಮೂದು ಇರುತ್ತದೆ ಎಂದರೆ ಸರಿ. ಸ್ವಾಧೀನಪಡಿಸಿಕೊಳ್ಳುವ ವರ್ಷಕ್ಕೆ ಸಂಬಂಧಿಸಿದ ಉತಾರೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಿಜ ಸಂಗತಿ ಮರೆಮಾಚಲು ಸದರಿ ಉತಾರೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ನಮ್ಮ ಜಮೀನು ನೀರಾವರಿ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ನಮ್ಮ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದೆ ಎಂದು ಹೇಳಿದ್ದು, ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳುಹಿಸುತ್ತಿದ್ದೆವು. ಕಾರ್ಖಾನೆಯಲ್ಲಿ ಕಬ್ಬಿನ ತೂಕದ ಪಾವತಿ ನೀಡುತ್ತಿದ್ದರು ಎಂದರೆ ಸರಿ. ಕಬ್ಬಿನ ಬೆಲೆ ನೇರವಾಗಿ ಬ್ಯಾಂಕ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿ. ಕಬ್ಬಿನ ತೂಕದ ಪಾವತಿ ಮತ್ತು ಬ್ಯಾಂಕ ಅಕೌಂಟ ಸ್ಟೇಟಮೆಂಟ ಇವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ಜಮೀನಿನಲ್ಲಿ ಕಬ್ಬಿನ ಜೊತೆಗೆ ಇತರೆ ಲಘು ಬೆಳೆಗಳನ್ನು ಬೆಳೆಯುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿ ವರ್ಷ ಎಕರೆಗೆ

ರೂ.2,80,000/- ಆದಾಯ ಬರುತ್ತಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

4. ಹಳ್ಳಿಗಳಲ್ಲಿ ಬಡ್ಡಿಸಾಲ ಕೊಡುವ ಸಂದರ್ಭದಲ್ಲಿ ಜಮೀನುಗಳಿಗೆ ಸಂಬಂಧಿಸಿದ ಖರೀದಿ ಕರಾರು ಪತ್ರ ಮಾಡುವ ಪದ್ಧತಿ ಇರುತ್ತದೆ ಎಂದರೆ ಸರಿ. ನಿಪಿ-5, 8 ರಿಂದ 10 ಖರೀದಿ ಕರಾರು ಪತ್ರಗಳನ್ನು ಸಾಲದ ಭದ್ರತೆಗಾಗಿ ಮಾಡಿಕೊಂಡಿರುತ್ತವೆ ಎಂದರೆ ಸರಿ. ನಿಪಿ-5, 8 ರಿಂದ 10 ರಲ್ಲಿ ನಮೂದು ಮಾಡಿದ ಜಮೀನು ಇನ್ನೂ ಖರೀದಿಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-5, 8 ರಿಂದ 10 ಖರೀದಿ ಕರಾರು ಪತ್ರಗಳು ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಿಂದ 4, 6, 7, 11 ಮತ್ತು 12, ಖರೀದಿ ಪತ್ರಗಳಿಗೆ ಸಂಬಂಧಿಸಿದ ಜಮೀನುಗಳು ಹಾಗೂ ನಿಪಿ-5, 8 ರಿಂದ 10 ಖರೀದಿ ಕರಾರು ಪತ್ರಗಳಿಗೆ ಸಂಬಂಧಿಸಿದ ಜಮೀನುಗಳು ಹಾಗೂ ನಿಪಿ-13 ಆದೇಶಕ್ಕೆ ಸಂಬಂಧಿಸಿದ ಜಮೀನು ಹಾಗೂ ನನ್ನ ಸ್ವಾಧೀನಗೊಂಡ ಜಮೀನು ಒಂದೇ ಗುಣಮಟ್ಟದ ಜಮೀನುಗಳು ಎಂದು ತೋರಿಸಲು ತಜ್ಞರಿಂದ ಮಣ್ಣು ಪರೀಕ್ಷಿಸಿ ಯಾವುದೇ ವರದಿ ಸಲ್ಲಿಸಿರುವುದಿಲ್ಲ. ಸದರಿ ಜಮೀನುಗಳು ಸ್ವಾಧೀನಗೊಂಡ ಜಮೀನಿಗೆ ಹೊಂದಿಕೊಂಡಂತೆ ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

5. ತುಂಡು ಜಮೀನುಗಳನ್ನು ಮನೆ ಮತ್ತು ಅಂಗಡಿಗಳನ್ನು ಕಟ್ಟಲು ಖರೀದಿಸಿರುತ್ತಾರೆ ಎಂದರೆ ಸರಿ. ನಿಪಿ-12 ಚಮಕೇರಿ ಗ್ರಾಮದ ಖರೀದಿ ಪತ್ರದ ಜಮೀನು ಮನೆ ಕಟ್ಟಲು ಖರೀದಿಸಿದ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಿಪಿ-12ರಲ್ಲಿನ ಜಮೀನು ತುಂಡು ಜಮೀನಾಗಿರುವುದರಿಂದ ಅದನ್ನು ಹೆಚ್ಚಿನ ಬೆಲೆಗೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

6. ಐತೀರ್ಪು ಹೊರಡಿಸಿದ ನಂತರ ನನಗೆ 1ನೇ ಪ್ರತಿವಾದಿಯವರು ಯಾವುದೇ ನೋಟಿಸ ಜಾರಿ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಅಧಿಕಾರಿಗಳು ನನ್ನ ಜಮೀನನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಒಣಬೇಸಾಯ ಜಮೀನು ಎಂದು ಪರಿಗಣಿಸಿ ಸೂಕ್ತ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ

ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಸರಿಯಲ್ಲ.

ಪಾಟೀ **ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಎಸ್ ಎನ್ ಜಿ ವಕೀಲರಿಂದಃ**

7. 1ನೇ ಪ್ರತಿವಾದಿಯವರು ಜಮೀನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶಕ್ಕೆ ದಿನಾಂಕ 08.03.2012ರಂದು ಅಧಿಸೂಚನೆ ಹೊರಡಿಸಿರುತ್ತಾರೆ ಎಂದರೆ ಸರಿ. ನಂತರ ನಮ್ಮ ಜಮೀನಿಗೆ ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಜಂಟಿ ಮೋಜಣಿ ಸಮಯದಲ್ಲಿ ಜಮೀನು ನೀರಾವರಿ ಅಥವಾ ಒಣಬೇಸಾಯ ಎಂದು ಕಂಡುಬರುತ್ತದೆ ಎಂದರೆ ಸರಿ. ಜಂಟಿ ಮೋಜಣಿ ಸಮಯದಲ್ಲಿ ನಮ್ಮ ಜಮೀನಿನಲ್ಲಿ ನೀರಾವರಿ ಬೆಳೆಗಳು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ನೀರಾವರಿ ಬೆಳೆಗಳನ್ನು ಬೆಳೆಯುತ್ತಿದ್ದೆವು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಅಧಿಕಾರಿಗಳು ನನ್ನ ಜಮೀನು ಒಣಬೇಸಾಯ ಜಮೀನು ಇರುತ್ತದೆ ಎಂದು ನಮೂದಿಸಿರುವುದು ಸರಿ ಇರುತ್ತದೆ ಎಂದರೆ ಸರಿಯಲ್ಲ. ದಿನಾಂಕ 21.11.2015ರಂದು ಐತೀರ್ಪು ಹೊರಡಿಸಿರುತ್ತಾರೆ ಎಂದರೆ ಸರಿ. ನಂತರ ನನಗೆ ದಿನಾಂಕ 02.05.2017ರಂದು ನೋಟಿಸ ಜಾರಿಯಾಗಿದ್ದು, ಹೆಚ್ಚಿ ನ ಪರಿಹಾರ ನೀಡುವಂತೆ 11.05.2017ರಂದು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯನ್ನು 1ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ದಿನಾಂಕ 20.06.2018ರಂದು ಕಳುಹಿಸಿದ್ದು, ಬೇಗ ತರಿಸಿಕೊಳ್ಳಲು ನ್ಯಾಯಾಲಯಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ.

8. ಐತೀರ್ಪಿನ 1ನೇ ಕೋಷ್ಟಕದಲ್ಲಿ ನಮೂದಿಸಿದ ಜಮೀನುಗಳು ನಮ್ಮ ಜಮೀನಿನ ಅಕ್ಕಪಕ್ಕದ ಜಮೀನುಗಳು ಎಂದರೆ ಸರಿ. ಸದರಿ ಜಮೀನುಗಳು ಒಂದೇ ಗುಣಮಟ್ಟದ ಜಮೀನುಗಳು ಎಂದರೆ ಸರಿ. 2009-2012ರ ಅವಧಿಯಲ್ಲಿ ಸಾಕಷ್ಟು ಜಮೀನುಗಳು ಮಾರಾಟವಾಗಿರುತ್ತವೆ ಎಂದರೆ ಸರಿ. 1ನೇ ಪ್ರತಿವಾದಿಯವರು ನನ್ನ ಜಮೀನಿನ ಸುತ್ತಮುತ್ತಲಿನ ಜಮೀನುಗಳ ಮಾರಾಟದ ಅಂಕಿ ಅಂಶಗಳನ್ನು ಐತೀರ್ಪಿನ 1 ಮತ್ತು 2ನೇ ಕೋಷ್ಟಕದನ್ವಯ ಸೂಕ್ತ ಬೆಲೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

9. ಒಣಬೇಸಾಯದ ಜಮೀನುಗಳ ಬೆಲೆಗಿಂತ ನೀರಾವರಿ ಜಮೀನುಗಳ ಬೆಲೆ ಹೆಚ್ಚಿ ಗೆ ಇರುತ್ತವೆ ಎಂದರೆ ಸರಿ. ಊರಿಗೆ ಹೊಂದಿಕೊಂಡಂತೆ ಇರುವ ಜಮೀನುಗಳ ಬೆಲೆ ಹೆಚ್ಚಿ ಗೆ ಇರುತ್ತದೆ ಎಂದರೆ ಸರಿ. ನಿಪಿ-2 ರಿಂದ 4 ಜಮೀನುಗಳು ನೀರಾವರಿ ಮತ್ತು ಊರಿಗೆ ಹೊಂದಿಕೊಂಡ ಜಮೀನುಗಳಿದ್ದು, ಆದ್ದರಿಂದ ಅವು ಹೆಚ್ಚಿ ನ ಬೆಲೆಗೆ ಮಾರಾಟವಾಗಿವೆ ಎಂದರೆ ಸರಿಯಲ್ಲ. ಬೇರೆ ಬೇರೆ ಗ್ರಾಮಗಳ ಜಮೀನುಗಳ ಫಲವತ್ತತೆ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿ. ಐಗಳಿ, ಕೋಹಳ್ಳಿ ಮತ್ತು ಚಮಕೇರಿ ಇವು ತೇಲಸಂಗ ಗ್ರಾಮಕ್ಕಿಂತ ದೊಡ್ಡ ಗ್ರಾಮಗಳು ಎಂದರೆ ಸರಿಯಲ್ಲ. ನಿಪಿ-2 ರಿಂದ 12 ನೀರಾವರಿ ಜಮೀನುಗಳು ಮತ್ತು ಊರಿಗೆ ಹೊಂದಿಕೊಂಡಂತೆ ಇರುವ ಜಮೀನುಗಳು ಇರುವುದರಿಂದ ಅವುಗಳು ಹೆಚ್ಚಿ ನ ಬೆಲೆಗೆ ಮಾರಾಟವಾಗಿವೆ ಎಂದರೆ ಸರಿಯಲ್ಲ. ನಿಪಿ-13 ಆದೇಶದ ವಿರುದ್ಧ 2ನೇ ಪ್ರತಿವಾದಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-14 ನಕಾಶೆಯಲ್ಲಿ ಜಮೀನುಗಳ ಅಂತರ ನಮೂದು ಮಾಡಿರುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.